


## ಮಂದಹಾಸ




ಯಾಕೋ ಒಂಥರಾ ಭಯವಾದಂತಾಗಿ ಅಂಥಾ ಏರ್ ಕಂಡೀಷನ್‌ನಲ್ಲೂ ಮೈ ಬೆವರಿತು. ರೂಮಿನ ಉಷ್ಣತೆಯನ್ನು ಇನ್ನಷ್ಟು ಕಡಿಮೆ ಮಾಡಿದರೆ ಬೆವರು ನಿಲ್ಲಬಹುದೆನ್ನಿಸಿ, ಹಾಗಂತ ರಿಸೆಪ್ಷನ್‌ಗೆ ಹೇಳಲು ಫೋನಿನತ್ತ ಹೋದೆ. ಆದರೆ, ಯಾವುದಕ್ಕೂ ಫೋನಿನ ಬಗ್ಗೆ ಪತ್ರದಲ್ಲಿ ಏನಾದರೂ ಇದೆಯಾ ಅಂತಾ ತಿಳಿದುಕೊಳ್ಳಲು ಅದನ್ನು ಮತ್ತೆ ಓದಲು ಶುರು ಮಾಡಿದೆ. ನಿರೀಕ್ಷೆ ಸುಳ್ಳಾಗಲಿಲ್ಲ. ಒಂದೆರಡು ನಿಮಿಷ ಹುಡುಕಾಡಿದ ಮೇಲೆ ಅದರ ಬಗ್ಗೆ ಹೀಗೆ ಬರೆದಿತ್ತು.

'ನಿಮಗೆ ಫೋನ್ ಬಳಸಬೇಕು ಅಂತಾದರೆ ಧಾರಾಳವಾಗಿ ಬಳಸಿ. ಅದಕ್ಕೆ ನಾವೇನೂ ಚಾರ್ಜ್ ಮಾಡುವುದಿಲ್ಲ. ನಿಮಗೊಂದು ವಿಷಯ ಗೊತ್ತಿರಲಿ. ಫೋನು ಹಲವಾರು ಬಾರಿ ಕೆಲಸ ಮಾಡುವುದಿಲ್ಲ. ತಿಂಗಳಿಗೆ ಐದಾರು ಬಾರಿ ಫೋನಿನ ಕಂಪನಿಯವರು ಬಂದು ಅದೇನೋ ಮಾಡಿ, 'ಸರಿಯಾಯಿತು' ಅಂತಾ ಹೇಳಿ ಹೋಗುತ್ತಾರೆ. ಮತ್ತೆ ಏನೋ ಎಡವಟ್ಟಾಗಿರುತ್ತದೆ. ಮೊನ್ನೆ ಒಬ್ಬರು ರಿಸೆಪ್ಷನ್‌ಗೆ ಫೋನ್ ಮಾಡಲು ಹೋಗಿ, ಅದು ರೂಮಿನಲ್ಲಿರುವ ಅತಿಥಿಗೆ ಹೋಗಿದೆ. ಅವರನ್ನೇ ರಿಸೆಪ್ಷನಿಸ್ಟ್ ಅಂತಂದುಕೊಂಡು ಬೇಗನೇ ಬಟ್ಟೆ ಇಸ್ತ್ರಿ ಮಾಡಿ ಕಳಿಸುವಂತೆ ದಬಾಯಿಸಿದ್ದಾರೆ. ಹಾಗೆ ದಬಾಯಿಸಿಕೊಂಡ ಅತಿಥಿ ತನ್ನ ಗಂಡನನ್ನು ಕರೆದುಕೊಂಡು ಬಂದು ಫೋನ್ ಮಾಡಿದವನ ಜೊತೆ ಜಗಳವಾಡ್ದಾರೆ. ಅದು ವಿಕೋಪಕ್ಕೆ ಹೋಗಿ ಇಬ್ಬರೂ ಹೊಡೆದಾಡಿಕೊಂಡಿದ್ದಾರೆ...'

ಅಲ್ಲಿಗೆ ಫೋನ್ ಮಾಡುವ ಆಸೆಯನ್ನು ಕೈಬಿಟ್ಟೆ. ಲಿಫ್ಟ್ ಉಪಯೋಗಿಸಿದರೆ ಆಗುವ ಅನಾಹುತ, ರೂಮ್ ಸರ್ವಿಸ್ ಹುಡುಗನನ್ನು ಕರೆದರೆ ಆಗುವ ಕಿರಿಕಿರಿ, ಮೆತ್ತನೆಯ ಹಾಸಿಗೆಯ ಮೇಲೆ ಒರಗಿದರೆ ಆಗುವ ತೊಂದರೆ, ಹೀಗೆ ಬಹುತೇಕ ವಿಷಯಗಳ ಬಗ್ಗೆ ಬರೆಯಲಾಗಿತ್ತು ಅದರಲ್ಲಿ.



ಏನು ಮಾಡಬೇಕು ಅನ್ನುವುದೇ ತಿಳಿಯಲಿಲ್ಲ. ಸುಮ್ಮನೆ ಆ ಕಡೆ ಈ ಕಡೆ ನೋಡುತ್ತಾ ಒಂದೆರಡು ನಿಮಿಷ ಕಳೆದೆ. ಗುಲಾಬಿ ಹೂವುಗಳು ಕಣ್ಣಿಗೆ ಬಿದ್ದವು. ನಿಧಾನವಾಗಿ ಅವುಗಳನ್ನು ಕೈಗೆತ್ತಿಕೊಂಡೆ. ಮೂಗಿನ ಸಮೀಪಕ್ಕೆ ಕೊಂಡೊಯ್ದೆ ಅವುಗಳ ಪರಿಮಳ ಹೀರುವುದಕ್ಕಾಗಿ...

ಬೇಡವೆಂದರೂ ಕಣ್ಣುಗಳು ಮತ್ತೆ ಪತ್ರದತ್ತ ಹೊರಳಿದವು. 'ಹೂವುಗಳು ಯಾರಿಗೆ ತಾನೇ ಇಷ್ಟವಾಗಲ್ಲ? ಅದರಲ್ಲೂ ಕೆಂಗುಲಾಬಿಗಳಂತೂ ಮನಸ್ಸನ್ನು ಉಲ್ಲಸಿತಗೊಳಿಸಿಬಿಡುತ್ತವೆ. ನಿಮಗೆ ಉಲ್ಲಸಿತ ಅನುಭವ ನೀಡಬೇಕೆಂಬುದು ನಮ್ಮ ಹೋಟೆಲ್ಲಿನ ಉದ್ದೇಶ. ಹೀಗಾಗಿ, ನಿಮ್ಮಷ್ಟೇ ಸುಂದರವಾದ ವಿಶೇಷವಾಗಿ ಆಯ್ದ ಹೂವುಗಳನ್ನು ಇಲ್ಲಿಟ್ಟಿದ್ದೇವೆ...



ಆ ಹೂವುಗಳು ನಿಜವಾಗಿಯೂ ಸುಂದರವಾಗಿದ್ದವು. ಹೀಗೆ ಬರೆದದ್ದನ್ನು ನೋಡಿ ಕನಿಷ್ಠ ಪಕ್ಷ ಇದಾದರೂ ಸರಿಯಾಗಿದೆ ಅಂತಂದುಕೊಂಡೆ. ಆದರೂ ಒಳಮನಸ್ಸು ಎಚ್ಚರಿಸಿತು; ಮುಂದೆ ಓದುತ್ತಾ ಹೋದೆ.

ಇತ್ತೀಚಿನ ದಿನಗಳಲ್ಲಿ ಅನೇಕ ಹೋಟೆಲುಗಳಲ್ಲಿ ಕಾಸ್ಟ್ ಕಟಿಂಗ್ ಹೆಸರಿನಲ್ಲಿ ಅತಿಥಿಗಳಿಗೆ ಈ ಥರದ ಅನುಭವ ದಕ್ಕದಂತೆ ಮಾಡುತ್ತಿದ್ದಾರೆ. ಹೂವುಗಳ ಬೆಲೆಯೂ ಗಗನಕ್ಕೇರಿರುವುದು ಇದಕ್ಕೆ ಪೂರಕವೆನ್ನಿ. ಆದರೆ, ಅತಿಥಿಯೇ ನಮಗೆ ಮೊದಲ ಆದ್ಯತೆ. ಅವರಿಗೆ ವಿಶಿಷ್ಟ ಅನುಭವ ನೀಡಲು ನಾವು ಎಷ್ಟು ದೂರ ಸಾಗಲೂ ಸಿದ್ಧ. ಸುಲಭ ಬೆಲೆಯಲ್ಲಿ ಹೂವುಗಳನ್ನು ಕೊಳ್ಳಲು ನಾವೊಂದು ಉಪಾಯ ಕಂಡುಕೊಂಡಿದ್ದೇವೆ. ಇಲ್ಲಿಂದ ಇಪ್ಪತ್ತು ಕಿಲೋಮೀಟರು ದೂರದಲ್ಲಿ ಒಂದು ಸ್ಮಶಾನವಿದೆ. ಅಲ್ಲಿ ಹೆಣಗಳನ್ನು ಸುಡುವ ಮುಂಚೆ ಅದರ ಮೇಲಿರುವ ಹೂವುಗಳಲ್ಲಿ ಗುಲಾಬಿ ಹೂಗಳನ್ನು ಆರಿಸಿ ಪಕ್ಕಕ್ಕೆ ಎತ್ತಿಡುತ್ತಾರೆ. ಆ ಹೂವುಗಳು ವಿನಾಕಾರಣ ಹಾಳಾಗಬಾರದು ಅನ್ನುವ ಸದುದ್ದೇಶದಿಂದ ಅವುಗಳನ್ನು ಸೂಕ್ತ ಬೆಲೆಗೆ ಕೊಂಡುಕೊಳ್ಳುತ್ತೇವೆ. ಹಾಗಂತ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳುತ್ತೇವೆಂದು ಭಾವಿಸಬೇಡಿ. ಹಾಗೆ ಸಂಗ್ರಹಿಸಿದ ಹೂವುಗಳನ್ನು ಚೆನ್ನಾಗಿ ತೊಳೆದು, ಅವುಗಳಿಗೆ ಸುಗಂಧ ದ್ರವ್ಯ ಸಿಂಪಡಿಸಿ, ಸಿಂಗರಿಸಿ ಇಡುತ್ತೇವೆ. ಅಷ್ಟೇ ಅಲ್ಲ, ಸತ್ತವರಿಗೆ ಯಾವುದೇ ಸಾಂಕ್ರಾಮಿಕ ರೋಗವಿರಲಿಲ್ಲವೆಂದು ದೃಢೀಕರಿಸಿಕೊಳ್ಳುತ್ತೇವೆ. ಅದಕ್ಕೆ ಸಂಬಂಧಿಸಿದ ಕ್ವಾಲಿಟಿ ಸರ್ಟಿಫಿಕೇಟ್ ಮೂಲೆಯಲ್ಲಿರುವ ಟೀಪಾಯಿಯ ಮೇಲಿದೆ. ಬೇಕಿದ್ದರೆ ಪರಿಶೀಲಿಸಬಹುದು. ಹೂವುಗಳನ್ನು ನೋಡಿದರೆ, ಅದರ ಹಿಂದೆ ನಮ್ಮ ಇಷ್ಟು ಶ್ರಮ ಇದೆಯೆಂದು ಗೊತ್ತಾಗುವುದೇ ಇಲ್ಲ. ನಿಜ ಹೇಳಿ, ಇದು ನಿಮಗೆ ಗೊತ್ತಾಗಿತ್ತೇ?'

ಇದನ್ನು ಓದಿದ ಕೂಡಲೇ ಗಾಬರಿಯಿಂದ ಹೂವುಗಳನ್ನು ನೆಲದ ಮೇಲೆ ಎಸೆದುಬಿಟ್ಟೆ. ಇನ್ನು ಹೋಟೆಲಿನ ಸಹವಾಸ ಸಾಕೆಂದು ಬ್ಯಾಗ್ ಹಿಡಿದುಕೊಂಡು ಹೊರಟುಬಿಟ್ಟೆ. ಬರುವಾಗ ಲಿಫ್ಟಿನಲ್ಲಿ ಬಂದಿದ್ದೆನಾದರೂ, ಈಗ ಲಿಫ್ಟಿನ ಮೂಲಕ ಹೋಗಲು ಧೈರ್ಯ ಸಾಲದೇ, ಆರು ಮಹಡಿ ಇಳಿದುಕೊಂಡೇ ರಿಸೆಪ್ಷನ್ ಕಡೆ ಹೋದೆ. ಅಲ್ಲಿ ನೋಡಿದರೆ ಸುಮಾರು ಮೂವತ್ತು ಮಂದಿ ಅದಾಗಲೇ ಸೇರಿದ್ದಾರೆ. ಎಲ್ಲರ ಕೈಯ್ಯಲ್ಲೂ ಇದೇ ಥರದ ಪತ್ರವಿದೆ. ಎಲ್ಲರೂ ಜೋರು ದನಿಯಲ್ಲಿ ಮಾತನಾಡುತ್ತಿದ್ದಾರೆ. ಅಲ್ಲಿಯ ಮ್ಯಾನೇಜರ್ ಎಲ್ಲರಿಗೂ ಸಮಜಾಯಿಷಿ ಕೊಡುತ್ತಾ ನಿಂತಿದ್ದಾನೆ. ಕೊನೆಗೆ ಗೊತ್ತಾದದ್ದು ಇಷ್ಟು ದಿನ ಒಬ್ಬ ರೂಮ್ ಸರ್ವಿಸ್ ಹುಡುಗ ಇದ್ದನಂತೆ. ಆತನಿಗೆ ಓದುವುದು ಮತ್ತು ಬರೆಯುವುದರಲ್ಲಿ ತುಂಬಾ ಆಸಕ್ತಿ. ಹೆಚ್ಚು ಸಮಯ ಅದರಲ್ಲೇ ಕಳೆಯುತ್ತಿದ್ದ. ಏನೋ ಒಂದು ಚಿಕ್ಕ ತಪ್ಪು ಮಾಡಿದ್ದರ ನೆಪ ಮಾಡಿಕೊಂಡು ಸಂಬಳ ಕೊಡದೇ ಅವನನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ಅದಕ್ಕೆ ಆತ ಈ ಥರದ ಪತ್ರಗಳನ್ನು ರೂಮುಗಳಲ್ಲಿ ಇಟ್ಟಿದ್ದಾನೆ.

ಅಲ್ಲಿನ ಜನರಲ್ ಮ್ಯಾನೇಜರ್ ಬಂದು ಎಷ್ಟೇ ಸಮಾಧಾನ ಮಾಡಿದರೂ ಜನ ಕೇಳುವ ಸ್ಥಿತಿಯಲ್ಲಿರಲಿಲ್ಲ. ಕೊನೆಗೆ, ಅವರಿಗೆಲ್ಲ ಅವರ ಹಣ ವಾಪಸು ಕೊಟ್ಟು, ಕ್ಷಮೆ ಕೇಳಿ ಕಳಿಸಲಾಯಿತು. ನಾನೂ, ನನ್ನ ಕಂಪೆನಿ ಪಾವತಿಸಿದ ಹಣ ಪಡೆದು ಇನ್ನೊಂದು ಹೋಟೆಲಿಗೆ ಹೋಗಿ, ಲಗುಬಗೆಯಿಂದ ಸ್ನಾನಾದಿಗಳನ್ನು ಮುಗಿಸಿಕೊಂಡು ಕಾನ್ಫರೆನ್ಸ್ ನಡೆಯುವ ಸ್ಥಳ ತಲುಪಿದೆ.

ಅಂದಹಾಗೆ ಕಾನ್ಫರೆನ್ಸ್‌ನ ವಿಷಯ ಸೃಜನಶೀಲ ಉದ್ಯೋಗಿಗಳನ್ನು ಕಳೆದುಕೊಳ್ಳುವುದರಿಂದ ಸಂಸ್ಥೆಗೆ ಆಗುವ ನಷ್ಟ!

ಪ್ರತಿಕ್ರಿಯಿಸಿ: feedback@sudha.co.in